National

Kannada

30.10.2025: 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಗುಜರಾತ್‌ನ ಏಕತಾ ನಗರದಲ್ಲಿ ಇಂದು ೧ ಸಾವಿರದ ೧೪೦ ಕೋಟಿಗೂ ಅಧಿಕ ಮೌಲ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

೨. ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಭಾರತ ಅಮೆರಿಕದೊಂದಿಗೆ ನಿರಂತರ ಸಂಪರ್ಕದಲ್ಲಿದೆ - ವಿದೇಶಾಂಗ ಸಚಿವಾಲಯ

೩. ನಗರೀಕರಣ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಪರಿವರ್ತನೆಯ ಪ್ರಮುಖ ಆಯಾಮ - ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್

೪. ಕಡಲ ಅಮೃತ್ ಕಾಲ್ ವಿಷನ್ ಸಾಕಾರಗೊಳಿಸಲು ಭಾರತ, ಪ್ರಾಚೀನ ಕಡಲಜ್ಞಾನವನ್ನು ಬಳಸಿಕೊಳ್ಳಬೇಕು - ಕೇಂದ್ರ ಸಚಿವ ಮನ್ಸೂಖ್ ಮಾಂಡವೀಯ ಕರೆ

*************

ಪ್ರಧಾನಿ ನರೇಂದ್ರ ಮೋದಿ ಇಂದು ಗುಜರಾತ್‌ಗೆ ಎರಡು ದಿನಗಳ ಭೇಟಿಯನ್ನು ಆರಂಭಿಸಲಿದ್ದಾರೆ. ಪ್ರಧಾನಿಯವರು ಇಂದು ಸಂಜೆ ಏಕತಾ ನಗರದಲ್ಲಿ ೧ ಸಾವಿರದ ೧೪೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ, ೨೫ ಇ-ಬಸ್‌ಗಳಿಗೆ ಚಾಲನೆ ನೀಡಿದರು. ನಾಳೆ, ಪ್ರಧಾನಿ ಮೋದಿ ಅವರು ರಾಷ್ಟ್ರೀಯ ಏಕತಾ ದಿವಸ್ ಆಚರಣೆಯ ಭಾಗವಾಗಿ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ೧೫೦ ನೇ ಜನ್ಮ ದಿನಾಚರಣೆಯ ಅಂಗವಾಗಿ ಏಕತಾ ಪ್ರತಿಮೆಯಲ್ಲಿ ಅವರಿಗೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ಈ ಕಾರ್ಯಕ್ರಮಗಳ ನಂತರ, ಪ್ರಧಾನಿ ನರೇಂದ್ರ ಮೋದಿ ಅವರು ಆರಂಭ್ ೭.೦ ಕಾರ್ಯಕ್ರಮದ ಸಮಾರೋಪ ಸಂದರ್ಭದಲ್ಲಿ ೧೦೦ನೇ ಕಾಮನ್ ಫೌಂಡೇಶನ್ ಕೋರ್ಸ್‌ನ ಅಧಿಕಾರಿ ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಇಂದು ಸಂಜೆ ಪ್ರಾರಂಭವಾಗಲಿರುವ ವಿವಿಧ ಅಭಿವೃದ್ಧಿ ಯೋಜನೆಗಳು ಏಕತಾ ನಗರ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ, ಹಸಿರು ಸಾರಿಗೆ, ಆಧುನಿಕ ಮೂಲಸೌಕರ್ಯ ಮತ್ತು ಬುಡಕಟ್ಟು ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿವೆ.

*************

ಭಾರತವು ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಬಗ್ಗೆ ಅಮೆರಿಕದ ಜೊತೆ ನಿರಂತರ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ಸಚಿವಾಲಯ ಇಂದು ತಿಳಿಸಿದೆ. ಇಂದು ಮಧ್ಯಾಹ್ನ ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಈ ವಿಷಯದ ಕುರಿತು ಎರಡೂ ಕಡೆಯವರು ಚರ್ಚೆಗಳನ್ನು ಮುಂದುವರಿಸುತ್ತಿದ್ದಾರೆ ಎಂದು ಹೇಳಿದರು. ರಷ್ಯಾದ ತೈಲ ಕಂಪನಿಗಳ ಮೇಲಿನ ಇತ್ತೀಚಿನ ಅಮೆರಿಕದ ನಿರ್ಬಂಧಗಳ ಪರಿಣಾಮಗಳನ್ನು ಭಾರತವು ಅಧ್ಯಯನ ಮಾಡುತ್ತಿದೆ. ನವದೆಹಲಿಯ ನಿರ್ಧಾರಗಳು ಸ್ವಾಭಾವಿಕವಾಗಿ ಜಾಗತಿಕ ಮಾರುಕಟ್ಟೆಯ ವಿಕಸನಗೊಳ್ಳುತ್ತಿರುವ ಚಲನಶೀಲತೆಯನ್ನು ಗಣನೆಗೆ ತೆಗೆದುಕೊಳ್ಳುತ್ತವೆ ಎಂದು ಅವರು ಹೇಳಿದರು. ಭಾರತವು ಅಫ್ಘಾನಿಸ್ತಾನದ ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ಸ್ವಾತಂತ್ರ್ಯಕ್ಕೆ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಅವರು ಹೇಳಿದರು. ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಜೈಸ್ವಾಲ್, ಜಲವಿದ್ಯುತ್ ಯೋಜನೆಗಳು ಸೇರಿದಂತೆ ಅಫ್ಘಾನಿಸ್ತಾನದ ಸುಸ್ಥಿರ ನೀರಿನ ನಿರ್ವಹಣೆಯಲ್ಲಿ ಭಾರತವು ಬೆಂಬಲ ನೀಡಲು ಸಿದ್ಧವಾಗಿದೆ ಎಂದು ಅವರು ಹೇಳಿದರು.

*************

ನಗರೀಕರಣವು ಭಾರತದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಪರಿವರ್ತನೆಯ ಪ್ರಮುಖ ಆಯಾಮವಾಗಿದೆ ಎಂದು ಕೇಂದ್ರ ನಗರಾಭಿವೃದ್ಧಿ ಸಚಿವ ಮನೋಹರ ಲಾಲ್ ಖಟ್ಟರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಇಂದು ದಕ್ಷಿಣ ರಾಜ್ಯಗಳ ನಗರಾಭಿವೃದ್ಧಿ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ನಡೆದ ಪ್ರಾದೇಶಿಕ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರೀಕರಣ ಇಂದು ದೇಶದ ಅತಿ ದೊಡ್ಡ ಸವಾಲುಗಳಲ್ಲಿ ಒಂದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಭೆಯಲ್ಲಿ ಬೆಂಗಳೂರಿನ ನಗರ ಯೋಜನೆ, ಸಾರಿಗೆ ವ್ಯವಸ್ಥೆ, ನೀರು ಮತ್ತು ಒಳಚರಂಡಿ ಸೇವೆಗಳು, ಸ್ವಚ್ಛತೆ, ಮೆಟ್ರೋ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆದಿದೆ ಎಂದು ತಿಳಿಸಿದ್ದಾರೆ. ಕೆಲ ರಾಜ್ಯಗಳಿಗೆ ಬಾಕಿ ಉಳಿದ '೧೫ನೇ ಹಣಕಾಸು ಆಯೋಗದ ಅನುದಾನಗಳನ್ನು ಮೊತ್ತವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

*************

೨೦೪೭ ರ ಕಡಲ ಅಮೃತ್ ಕಾಲ್ ವಿಷನ್ ಅನ್ನು ಸಾಕಾರಗೊಳಿಸಲು ಭಾರತವು ತನ್ನ ಪ್ರಾಚೀನ ಕಡಲ ಬುದ್ಧಿವಂತಿಕೆಯನ್ನು ಬಳಸಿಕೊಳ್ಳಬೇಕು ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡೆ ಮತ್ತು ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದ್ದಾರೆ. ೨೦೨೫ರ ಇಂಡಿಯಾ ಮ್ಯಾರಿಟೈಮ್ ವೀಕ್ ಸಂದರ್ಭದಲ್ಲಿ ನಡೆದ "ಮ್ಯಾರಿಟೈಮ್ ಹ್ಯೂಮನ್ ಕ್ಯಾಪಿಟಲ್" ಅಧಿವೇಶನದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ವಾಸ್ಕೋ ಡ ಗಾಮಾ ಭಾರತಕ್ಕೆ ಆಗಮಿಸುವ ಮೊದಲೇ ಭಾರತೀಯ ವ್ಯಾಪಾರಿಗಳು ಪ್ರಪಂಚದಾದ್ಯಂತ ವ್ಯಾಪಕವಾದ ವ್ಯಾಪಾರ ಮಾರ್ಗಗಳನ್ನು ಸ್ಥಾಪಿಸಿದ್ದರು. ಭಾರತವು ಒಂದು ಕಾಲದಲ್ಲಿ ಹಡಗು ನಿರ್ಮಾಣ ಮತ್ತು ಕಡಲ ಸಾಮರ್ಥ್ಯಗಳಲ್ಲಿ ಜಾಗತಿಕ ನಾಯಕನಾಗಿತ್ತು ಎಂದು ಅವರು ಹೇಳಿದರು.

*************

ಭಾರತದ ೫೩ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೂರ್ಯಕಾಂತ್ ಆಯ್ಕೆಯಾಗಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರನ್ನು ಅಭಿನಂದಿಸಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರ ನೇಮಕಾತಿ ಮುಂದಿನ ತಿಂಗಳು ೨೪ ರಿಂದ ಜಾರಿಗೆ ಬರಲಿದೆ. ಅವರು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ನಂತರ ಅಧಿಕಾರ ವಹಿಸಿಕೊಳ್ಳಲಿದ್ದಾರೆ, ಅವರ ಅಧಿಕಾರಾವಧಿ ಮುಂದಿನ ತಿಂಗಳು ೨೩ ರಂದು ಕೊನೆಗೊಳ್ಳಲಿದೆ.

*************

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದು ಸೈಪ್ರಸ್‌ನ ಸಾರ್ವಭೌಮತ್ವ, ಏಕತೆ ಮತ್ತು ಪ್ರಾದೇಶಿಕ ಸಮಗ್ರತೆಗೆ ಭಾರತದ ಅಚಲ ಬೆಂಬಲವನ್ನು ಪುನರುಚ್ಚರಿಸಿದರು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಗಳಿಗೆ ಅನುಸಾರವಾಗಿ ರಾಜಕೀಯ ಸಮಾನತೆಯೊಂದಿಗೆ ಉಭಯ ವಲಯ ಹಾಗೂ ಉಭಯ ಸಮುದಾಯಗಳ ಒಕ್ಕೂಟಕ್ಕಾಗಿಯೂ ಅವರು ಒತ್ತಾಯಿಸಿದರು. ನವದೆಹಲಿಯಲ್ಲಿ ಇಂದು ತಮ್ಮ ಸೈಪ್ರಸ್ ನ ವಿದೇಶಾಂಗ ಸಚಿವ ಡಾ. ಕಾನ್ಸ್ಟಂಟಿನೋಸ್ ಕೊಂಬೋಸ್ ಅವರೊಂದಿಗಿನ ಸಭೆಯಲ್ಲಿ ಡಾ. ಜೈಶಂಕರ್ ಈ ಹೇಳಿಕೆಗಳನ್ನು ನೀಡಿದರು. ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಸೈಪ್ರಸ್‌ನ ಸ್ಥಿರ ಬೆಂಬಲವನ್ನು ವಿದೇಶಾಂಗ ಸಚಿವರು ಶ್ಲಾಘಿಸಿದರು.

*************

ದೇಶದಲ್ಲಿ ಇಲ್ಲಿಯವರೆಗೆ ಹತ್ತು ಸಾವಿರ ರೈತ-ಉತ್ಪಾದಕ ಸಂಸ್ಥೆಗಳು ಸ್ಥಾಪನೆಯಾಗಿವೆ ಮತ್ತು ಕೆಲವು ಎಫ್‌ಪಿಒಗಳ ವಹಿವಾಟು ೧೦೦ ಕೋಟಿ ರೂಪಾಯಿಗಳನ್ನು ತಲುಪಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಇಂದು ನವದೆಹಲಿಯಲ್ಲಿ ನಡೆದ ಎರಡು ದಿನಗಳ ಎಫ್‌ಪಿಒ ಸಮಾಗಮ್ ೨೦೨೫ ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ಸಾವಿರದ ಒಂದು ನೂರು ಎಫ್‌ಪಿಒಗಳು ಈಗ ಕೋಟ್ಯಾಧಿಪತಿಗಳಾಗಿದ್ದಾರೆ. ೫೨ ಲಕ್ಷ ರೈತರು ಇದರ ಪ್ರಯೋಜನ ಪಡೆದಿದ್ದಾರೆ ಮತ್ತು ಈ ಉಪಕ್ರಮದ ಮೂಲಕ ಸರ್ಕಾರ ಎರಡು ಕೋಟಿ ರೈತರನ್ನು ತಲುಪುವ ಗುರಿಯನ್ನು ಹೊಂದಿದೆ ಎಂದು ಅವರು ಹೇಳಿದರು.

ಧ್ವನಿ - ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ

*************

ಡಿಜಿಟಲ್ ಇಂಡಿಯಾ ಉಪಕ್ರಮದ ಮೂಲಕ ಪ್ರಜಾಪ್ರಭುತ್ವದ ಮೂರು ಅಂಗಗಳಾದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳ ಡಿಜಿಟಲೀಕರಣ ನಡೆಯುತ್ತಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್ ಕುರಿತಾದ ೩ ನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಶಾಸಕಾಂಗವನ್ನು ಸುಧಾರಿಸಲು ನ್ಯಾಯಾಂಗ ಮತ್ತು ಕಾರ್ಯಾಂಗ ಡಿಜಿಟಲ್ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಿವೆ ಮತ್ತು ಅದು ಪ್ರಭಾವಶಾಲಿ ಫಲಿತಾಂಶಗಳನ್ನು ನೀಡುತ್ತಿದೆ ಎಂದು ಹೇಳಿದರು.

*************

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾಲ್ಕು ದಿನಗಳ ಭೂತಾನ್ ಭೇಟಿಗಾಗಿ ಆರ್ಥಿಕ ವ್ಯವಹಾರಗಳ ಇಲಾಖೆಯ ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದಾರೆ. ಈ ಭೇಟಿಯು ಭೂತಾನ್‌ನೊಂದಿಗಿನ ಭಾರತದ ನಿರಂತರ ಪಾಲುದಾರಿಕೆಯನ್ನು ಉತ್ತೇಜಿಸುತ್ತದೆ. ಇದು ಪರಸ್ಪರ ಗೌರವ, ವಿಶ್ವಾಸ ಮತ್ತು ಈ ಪ್ರದೇಶದಲ್ಲಿ ಪ್ರಗತಿ ಮತ್ತು ಸಮೃದ್ಧಿಗೆ ಹಂಚಿಕೆಯ ಬದ್ಧತೆಯನ್ನು ಒಳಗೊಂಡಿದೆ. ಹಣಕಾಸು ಸಚಿವರು ಭೂತಾನ್ ರಾಜ ಜಿಗ್ಮೆ ಖೇಸರ್ ನಾಮ್‌ಗ್ಯೆಲ್ ವಾಂಗ್‌ಚುಕ್ ಮತ್ತು ಭೂತಾನ್ ಪ್ರಧಾನಿ ದಾಶೋ ತ್ಶೆರಿಂಗ್ ಟೋಬ್ಗೇ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

*************

ನವರತ್ನ ರಕ್ಷಣಾ ಸಾರ್ವಜನಿಕ ವಲಯದ ಉದ್ಯಮವಾದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್. ೭೯೨ ಕೋಟಿ ರೂಪಾಯಿ ಮೌಲ್ಯದ ಹೆಚ್ಚುವರಿ ಆರ್ಡರ್‌ಗಳನ್ನು ಪಡೆದುಕೊಂಡಿದೆ. ಸಾಫ್ಟ್‌ವೇರ್ ಡಿಫೈನ್ಡ್ ರೇಡಿಯೋಗಳು, ಟ್ಯಾಂಕ್ ಉಪ ವ್ಯವಸ್ಥೆಗಳು, ಸಂವಹನ ಉಪಕರಣಗಳು, ಕ್ಷಿಪಣಿ ಘಟಕಗಳು, ಹಣಕಾಸು ನಿರ್ವಹಣಾ ಸಾಫ್ಟ್‌ವೇರ್, ಸೈಬರ್ ಭದ್ರತಾ ಪರಿಹಾರ, ನವೀಕರಣಗಳು, ಬಿಡಿಭಾಗಗಳು, ಸೇವೆಗಳು ಇತ್ಯಾದಿಗಳು ಸ್ವೀಕರಿಸಿದ ಪ್ರಮುಖ ಆರ್ಡರ್‌ಗಳಲ್ಲಿ ಸೇರಿವೆ. ಸಾಫ್ಟ್‌ವೇರ್ ಡಿಫೈನ್ಡ್ ರೇಡಿಯೋಗಳು ಮೊದಲ ಸಂಪೂರ್ಣ ಸ್ಥಳೀಯ ರೇಡಿಯೋಗಳಾಗಿದ್ದು, ಡಿಆರ್‌ಡಿಒ ಜೊತೆ ಜಂಟಿಯಾಗಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿ ಬಿಇಎಲ್ ನಿಂದ ತಯಾರಿಸಲ್ಪಟ್ಟಿದೆ. ಈ ಅತ್ಯಾಧುನಿಕ ಎಸ್‌ಡಿಆರ್‌ಗಳು ಅಸ್ತಿತ್ವದಲ್ಲಿರುವ ರೇಡಿಯೋಗಳೊಂದಿಗೆ ಪರಸ್ಪರ ಕಾರ್ಯನಿರ್ವಹಿಸಬಲ್ಲವು ಮತ್ತು ತಂತ್ರಜ್ಞಾನಗಳ ನಡುವೆ ಸುಗಮ ಪರಿವರ್ತನೆಯನ್ನು ಸುಗಮಗೊಳಿಸುತ್ತವೆ.

*************

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ೧೨ನೇ ಆಸಿಯಾನ್ ರಕ್ಷಣಾ ಸಚಿವರ ಸಭೆ-ಪ್ಲಸ್‌ನಲ್ಲಿ ಭಾಗವಹಿಸಲು ಇಂದು ಮಲೇಷ್ಯಾದ ಕೌಲಾಲಂಪುರಕ್ಕೆ ಎರಡು ದಿನಗಳ ಭೇಟಿಯನ್ನು ಕೈಗೊಂಡಿದ್ದಾರೆ. ೦೦ಆಒಒ-ಪ್ಲಸ್ ನವೆಂಬರ್ ೧ ರಂದು ನಡೆಯಲಿದೆ. ಈ ಸಭೆಯು ಆಸಿಯಾನ್ ಸದಸ್ಯ ರಾಷ್ಟ್ರಗಳು ಮತ್ತು ಭಾರತದ ನಡುವಿನ ರಕ್ಷಣಾ ಮತ್ತು ಭದ್ರತಾ ಸಹಕಾರವನ್ನು ಮತ್ತಷ್ಟು ಬಲಪಡಿಸುತ್ತದೆ, ಆಕ್ಟ್ ಈಸ್ಟ್ ನೀತಿಯನ್ನು ಮುನ್ನಡೆಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

*************

ತೆಲಂಗಾಣದಲ್ಲಿ, ಮೊಂಥಾ ಚಂಡಮಾರುತವು ರಾಜ್ಯದ ಅರ್ಧದಷ್ಟು ಭಾಗಗಳಲ್ಲಿ ಹಾನಿಯನ್ನುಂಟುಮಾಡಿತು, ವಿಶೇಷವಾಗಿ ನಿರ್ಣಾಯಕ ಭತ್ತದ ಕೊಯ್ಲು ಮತ್ತು ಹತ್ತಿ ಖರೀದಿ ಋತುವಿನಲ್ಲಿ ಬೆಳೆಗಳಿಗೆ ಭಾರೀ ನಷ್ಟವನ್ನುಂಟುಮಾಡಿದೆ. ನಲ್ಗೊಂಡದಿಂದ ಕರೀಂನಗರದವರೆಗೆ ೧೦ ಸೆಂ.ಮೀ ನಿಂದ ೪೦ ಸೆಂ.ಮೀ ವರೆಗಿನ ಭಾರೀ ಮಳೆಯು ಸಾವಿರಾರು ಎಕರೆಗಳಲ್ಲಿ ಭತ್ತದ ಬೆಳೆಗಳನ್ನು ನೆಲಸಮ ಮಾಡಿದೆ. ಪ್ರಾಥಮಿಕ ಅಂದಾಜಿನ ಪ್ರಕಾರ ಭತ್ತದ ರೈತರಿಗೆ ಗಣನೀಯ ನಷ್ಟವಾಗಿದೆ. ವಾರಂಗಲ್, ಖಮ್ಮಮ್ ಮತ್ತು ನಲ್ಗೊಂಡ ಜಿಲ್ಲೆಗಳಲ್ಲಿ ಮಳೆ ಹಾನಿ ತೀವ್ರವಾಗಿತ್ತು. ಮಾರುಕಟ್ಟೆ ಅಂಗಳಗಳಲ್ಲಿ ಖರೀದಿಗಾಗಿ ಕಾಯುತ್ತಿದ್ದ ದಾಸ್ತಾನುಗಳು ನೆನೆದು ಗುಣಮಟ್ಟ ಕ್ಷೀಣಿಸಲು ಕಾರಣವಾಯಿತು. ಮೆಣಸಿನಕಾಯಿ ಮತ್ತು ಇತರ ಆರಂಭಿಕ ಹಂತದ ಬೆಳೆಗಳು ಸಹ ನೀರಿನಿಂದ ತುಂಬಿ ಹೋಗಿದ್ದವು. ನಿರಂತರ ಮಳೆಯಿಂದಾಗಿ ರಾಜ್ಯದಲ್ಲಿ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದ್ದು,

ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಭಾರೀ ಪ್ರವಾಹದಿಂದಾಗಿ ರಸ್ತೆ ಮತ್ತು ರೈಲು ಜಾಲಗಳು ತೀವ್ರವಾಗಿ ಹಾನಿಗೊಳಗಾಗಿವೆ. ವಾರಂಗಲ್-ಖಮ್ಮಮ್ ಹೆದ್ದಾರಿ ಜಲಾವೃತಗೊಂಡಿದ್ದು, ಪೊಲೀಸ್ ಸಿಬ್ಬಂದಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಿದ್ದಾರೆ.

*************